ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

Office No.+91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಕ್ರ.ಸಂ.ರಾವಿರಾ/ಪರೀಕ್ಷೆ/ಸ್ನಾತಕ/2023-24/44 ದಿನಾಂಕ:11.05.2023

## ಸುತ್ತೋಲೆ

ರಾಯಚೂರು ವಿಶ್ವವಿದ್ಯಾಲಯವು ಸ್ನಾತಕ ಪ್ರಥಮ(ಎನ್.ಇ.ಪಿ)(ರೆಗ್ಯುಲರ್/ರಿಪೀಟರ್ಸ್) ಮತ್ತು ತೃತೀಯ(ಎನ್.ಇ.ಪಿ) ಸೆಮಿಸ್ಟರನ ಪರೀಕ್ಷೆಗಳನ್ನು ದಿನಾಂಕ:-15.05.2023 ರಿಂದ ಆರಂಭಿಸಿದ್ದು ಈ ಪರೀಕ್ಷೆಗೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಈ ಕೆಳಕಾಣಿಸಿದ ಸೂಚನೆಗಳನ್ನು ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಪಾಲಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

**ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ವಿಶೇಷ ಸೂಚನೆಗಳು:**

1. ಪರೀಕ್ಷೆಯ ದಿನದಂದು ಪ್ರಶ್ನೆಪತ್ರಿಕೆಗಳನ್ನು ಆಯಾ ಪರೀಕ್ಷಾ ಕೇಂದ್ರದ ಪ್ರಾಂಶುಪಾಲರುಗಳು ನಿಗದಿಪಡಿಸಿದ ಸಿಬ್ಬಂದಿಗಳು ಕಾಲೇಜಿನ ಸೀಲ್‌ನೊಂದಿಗೆ ಸಂಬಂಧಿಸಿದ ನೋಡಲ್ ಪರೀಕ್ಷಾ ಕೇಂದ್ರಗಳಿಗೆ ಹೋಗಿ **ಬೆಳ್ಳಿಗ್ಗೆ 9.15 ಕ್ಕೆ ಪ್ರಥಮ ಸೆಮಿಸ್ಟರನ ಹಾಗೂ ಮದ್ಯಾಹ್ನ 1.15 ಕ್ಕೆ ತೃತೀಯ ಸೆಮಿಸ್ಟರನ** ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿಕೊಳ್ಳತಕ್ಕದ್ದು.
2. ಪರೀಕ್ಷಾ ಕೇಂದ್ರದ ಪ್ರಾಂಶುಪಾಲರುಗಳು ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಸೀಲ್ ಮಾಡಿ ನಂತರ **ಪ್ರಥಮ ಸೆಮಿಸ್ಟರನ** ಬಂಡಲ್‌ಗಳನ್ನು ಮದ್ಯಾಹ್ನ 1.00 ಕ್ಕೆ ಹಾಗೂ **ತೃತೀಯ ಸೆಮಿಸ್ಟರನ** ಬಂಡಲ್‌ಗಳನ್ನು 5.00 ಘಂಟೆಯೊಳಗೆ ಸಂಬಂಧಿಸಿದ ನೋಡಲ್ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಬೇಕು.
3. **ಪ್ರತಿ ದಿನದ ಪ್ರಶ್ನೆ ಪತ್ರಿಕೆಯನ್ನು ಬೆಳ್ಳಿಗ್ಗೆ 9.45 ಕ್ಕೆ ಪ್ರಥಮ ಸೆಮಿಸ್ಟರನ ಹಾಗೂ ಮದ್ಯಾಹ್ನ 1.45 ಕ್ಕೆ ತೃತೀಯ ಸೆಮಿಸ್ಟರನ ಪ್ರಶ್ನೆ ಪತ್ರಿಕೆಯನ್ನು ಓಪನ್ ಮಾಡುವ ಮತ್ತು ರೂಮ್ ಸೂಪರ್‌ವೈಸರ್‌ಗಳಿಗೆ ಹಸ್ತಾಂತರಿಸುವ Geo-Tag ವಿಡೀಯೋವನ್ನು ರೇಕಾರ್ಡ್ ಮಾಡಿ ಅದೇ ದಿನದಂದು E-mail:** registrarevrur@gmail.com ಇ-ಮೇಲ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ತಪ್ಪದೆ ಕಳುಹಿಸಿಕೊಡಬೇಕು.
4. ಪರೀಕ್ಷಾ ದಿನದಂದು ಯಾವುದೇ ತರಹದ ಘಟನೆ ಅಥವಾ ಪರೀಕ್ಷೆ ತಡವಾಗಿ ಅಥವಾ ಪರೀಕ್ಷಾ ಪತ್ರಿಕೆ ಸಂಬಂಧವಾಗಿ ಇನ್ನಿತರ ಯಾವುದೇ ಸಮಸ್ಯೆಯಾದಲ್ಲಿ ಅಂತಹ ವರದಿಯನ್ನು ಪ್ರಾಂಶುಪಾಲರುಗಳು ಶೀಘ್ರವಾಗಿ ದೂರವಾಣಿ/ಇ-ಮೇಲ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.
5. ಮಹಾವಿದ್ಯಾಲಯದ ಪ್ರಾಂಶುಪಾಲರುಗಳು ಪ್ರಶ್ನೆ ಪತ್ರಿಕೆಗಳ ಕವರ್‌ಗಳ ಮೇಲೆ ಹಳೆಯ ದಿನಾಂಕಗಳು ಇರುವುದರಿಂದ ಪರಿಷ್ಕೃತ ಪರೀಕ್ಷಾ ದಿನಾಂಕಗಳನ್ನು ಪರಿಶೀಲಿಸಿ ವೇಳಾಪಟ್ಟಿಗನುಗುಣವಾಗಿ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿಕೊಳ್ಳತಕ್ಕದ್ದು.
6. ಈ ಬಾರಿ ಪ್ರಶ್ನೆ ಪತ್ರಿಕೆಗಳನ್ನು ಕಾಲೇಜು ವೈಜ್ ಪ್ಯಾಕಿಂಗ್ ಆಗಿರುವುದರಿಂದ ಪರೀಕ್ಷಾ ಕೇಂದ್ರದ ಪ್ರಶ್ನಪತ್ರಿಕೆಗಳನ್ನು ಹಾಗೂ ಟ್ಯಾಗ್ ಆಗಿರುವ ಕಾಲೇಜುಗಳ ಪ್ರಶ್ನಪತ್ರಿಕೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಪರೀಕ್ಷೆಗಳನ್ನು ನಡೆಸತಕ್ಕದ್ದು.
7. ಪರೀಕ್ಷೆಗೆ ಸಂಬಂಧಪಟ್ಟಂತೆ ಯಾವುದೇ ವ್ಯತ್ಯಾಸಗಳಾಗಿದ್ದಲ್ಲಿ ನೇರವಾಗಿ ಪ್ರಾಂಶುಪಾಲರುಗಳೆ ಹೊಣೆಗಾರರಾಗಿರುತ್ತಾರೆ.

(ಪ್ರೊ. ಯರಿಸ್ವಾಮಿ ಎಂ.)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ರಾಯಚೂರು ವಿಶ್ವವಿದ್ಯಾಲಯ Examination Section RAICHUR UNIVERSITY

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಕುಲಸಚಿವರ ಅವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಕಚೇರಿ ಪ್ರತಿ.